ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 17–11–2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ರಚಿಸಲಾಗಿರುವ ತಜ್ಞರ ಸಮಿತಿಯ ಮಹಿಳಾ ಸದಸ್ಯರನ್ನೊಳಗೊಂಡ ಉಪ ಸಮಿತಿಯ ಸಭೆ.<br><br>ಅಧ್ಯಕ್ಷತೆ:<br><br>ಶ್ರೀಮತಿ ಮೋಟಮ್ಮ,<br>ಅಧ್ಯಕ್ಷರು,<br>ಉಪ ಸಮಿತಿ. | 18–11–2004<br>ಮಂಗಳವಾರ<br>ಬೆಳಗ್ಗೆ<br>11–00 ಗಂಟೆಗೆ | ಕೊಠಡಿ ಸಂಖ್ಯೆ 338,<br>ಅಧ್ಯಕ್ಷರ ಕೊಠಡಿ,<br>3ನೇ ಮಹಡಿ, ವಿಧಾನಸೌಧ<br>ಬೆಂಗಳೂರು. |
| 2. | ಪತ್ರಿಕಾಗೋಷ್ಠಿ:<br><br>ಶ್ರೀ ಅಭಯ್‌ಚಂದ್ರ,<br>ಯುವಜನ ಸಬಲೀಕರಣ ಮತ್ತು ಮೀನುಗಾರಿಕೆ ರಾಜ್ಯ ಸಚಿವರು | 18–11–2004<br>ಮಂಗಳವಾರ<br>ಸಂಜೆ<br>4–30 ಗಂಟೆಗೆ | ಸಭಾಂಗಣ,<br>ಎರಡನೇ ಮಹಡಿ, ಯವನಿಕಾ<br>ಕಚೇರಿ, ನೃಪತುಂಗ ರಸ್ತೆ<br>ಬೆಂಗಳೂರು |

ನಿರ್ದೇಶಕರ ಪರವಾಗಿ

## ಮಾಧ್ಯಮ ಸಂಸ್ಥೆಗಳ ಮುಖ್ಯಸ್ಥರ ಗಮನಕ್ಕೆ

ಬೆಳಗಾವಿಯಲ್ಲಿ ಡಿಸೆಂಬರ್ 9 ರಿಂದ 20 ರ ವರೆಗೆ ನಡೆಯಲಿರುವ ರಾಜ್ಯ ವಿಧಾನ ಮಂಡಲ ಅಧಿವೇಶನದ ವರದಿಗಾಗಿ ಹಾಜರಾಗ ಬಯಸುವ ಸುದ್ದಿವಾಹಿನಿಗಳು ಹಾಗೂ ರಾಜ್ಯಮಟ್ಟದ ದಿನಪತ್ರಿಕೆಗಳ ***ಮಾನ್ಯತೆ ಪಡೆದ*** ಪ್ರತಿನಿಧಿಗಳ ವಿವರಗಳನ್ನು ಸಂಸ್ಥೆಯ ಶೀರ್ಷಿಕಾ ಪತ್ರ(ಲೆಟರ್‌ಹೆಡ್)ದಲ್ಲಿ ನಮೂದಿಸಿ ಸಲ್ಲಿಸಲು ಕೋರಲಾಗಿದೆ.

ಈ ಕೆಳಗೆ ನೀಡಿರುವ ನಮೂನೆಯ ಮಾದರಿಯಲ್ಲಿ ವಿವರಗಳನ್ನು ಒದಗಿಸಿ, ಸಂಸ್ಥೆಯ ಮುಖ್ಯಸ್ಥರೇ ಶಿಫಾರಸು ಮಾಡಿರಬೇಕು. ಮುದ್ರಣ ಮಾಧ್ಯಮದ ಗರಿಷ್ಠ ನಾಲ್ಕು ಪ್ರತಿನಿಧಿಗಳು ಹಾಗೂ ವಿದ್ಯುನ್ಮಾನ ಮಾಧ್ಯಮದ ವರದಿಗಾರರು,

ಕ್ಯಾಮರಾಮನ್ ಸೇರಿದಂತೆ ಗರಿಷ್ಠ 8 ಪ್ರತಿನಿಧಿಗಳಿಗೆ ಮಾತ್ರ ವಾಸ್ತವ್ಯ ವ್ಯವಸ್ಥೆ ಕಲ್ಪಿಸಲಾಗುವುದು. ಈ ಶಿಫಾರಸು ಪತ್ರ ಸಲ್ಲಿಸಲು ನವೆಂಬರ್ 25 ಕೊನೆಯ ದಿನವಾಗಿದೆ.

ವಿ.ಸೂ:

1. ಹಿಂದಿನ ಅಧಿವೇಶನದಲ್ಲಿ ಒದಗಿಸಿರುವ ಪ್ರವೇಶ ಪತ್ರ ಈ ಅಧಿವೇಶನಕ್ಕೂ ಅನ್ವಯವಾಗುತ್ತದೆ. ಹೊಸದಾಗಿ ಪ್ರವೇಶ ಪತ್ರ ನೀಡಲಾಗುವುದಿಲ್ಲ.
2. ತಡವಾಗಿ ಬಂದ ಮನವಿಗಳನ್ನು ಪುರಸ್ಕರಿಸಲು ಸಾಧ್ಯವಿಲ್ಲ.

ನಿರ್ದೇಶಕರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಗೆ,

ನಿರ್ದೇಶಕರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಬೆಂಗಳೂರು

ಮಾನ್ಯರೇ,

ವಿಷಯ: ವಿಧಾನ ಮಂಡಲ ಅಧಿವೇಶನ ವರದಿಗೆ ಪ್ರತಿನಿಧಿಗಳನ್ನು ನಿಯೋಜಿಸುವ ಬಗ್ಗೆ

ಬೆಳಗಾವಿಯಲ್ಲಿ ನಡೆಯಲಿರುವ ವಿಧಾನ ಮಂಡಲ ಅಧಿವೇಶನಕ್ಕೆ ನಮ್ಮ ಮಾಧ್ಯಮ ಸಂಸ್ಥೆಯಿಂದ ಈ ಕೆಳಕಂಡ ವರದಿಗಾರರು/ ಕ್ಯಾಮರಾಮನ್‌ಗಳನ್ನು ನಿಯೋಜಿಸಲಾಗಿದೆ.

ವಿಧಾನಸಭೆ ವರದಿ ಮಾಡುವ ವರದಿಗಾರರು/ ಕ್ಯಾಮರಾಮನ್‌ಗಳು:

| ಕ್ರ.ಸಂ. | ಹೆಸರು, ಪದನಾಮ | ಮಾನ್ಯತಾ ಪತ್ರ ಸಂಖ್ಯೆ | ಮೊಬೈಲ್ ಸಂಖ್ಯೆ |
|---|---|---|---|
| 1 | | | |
| 2 | | | |

ವಿಧಾನ ಪರಿಷತ್ ಕಲಾಪ ವರದಿ ಮಾಡುವ ವರದಿಗಾರರು/ ಕ್ಯಾಮರಾಮನ್‌ಗಳು:

| ಕ್ರ.ಸಂ. | ಹೆಸರು, ಪದನಾಮ | ಮಾನ್ಯತಾ ಪತ್ರ ಸಂಖ್ಯೆ | ಮೊಬೈಲ್ ಸಂಖ್ಯೆ |
|---|---|---|---|
| 1 | | | |
| 2 | | | |

ಸ್ಥಳ: ಸಂಸ್ಥೆಯ ಮುಖ್ಯಸ್ಥರು

ದಿನಾಂಕ:

# ಪತ್ರಿಕಾ ಪ್ರಕಟಣೆ

## ಸಚಿವ ಸಂಪುಟ ಸಭೆ

**ಬೆಂಗಳೂರು, 17 ನೇ ನವೆಂಬರ್ (ಕರ್ನಾಟಕ ವಾರ್ತೆ)**

ಕಲಬುರ್ಗಿಯಲ್ಲಿ ನಡೆಯಲಿರುವ 2014 ನೇ ಸಾಲಿನ ಸಚಿವ ಸಂಪುಟದ ಸಭೆಯು ನವೆಂಬರ್ 27 ರ 12-00 ಗಂಟೆ ಬದಲಿಗೆ ನವೆಂಬರ್ 28 ರಂದು ಬೆಳಿಗ್ಗೆ 11-00 ಗಂಟೆಗೆ ನಡೆಯಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಮ/ಕೆಎಂ**

## ಚಿತ್ತಾಲ - ಚಿಂತನೆ ಕಾರ್ಯಕ್ರಮ

**ಬೆಂಗಳೂರು, 17 ನೇ ನವೆಂಬರ್ (ಕರ್ನಾಟಕ ವಾರ್ತೆ)**

ಬೆಂಗಳೂರು ಆಕಾಶವಾಣಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಭಾರತೀಯ ವಿದ್ಯಾ ಭವನ, ಇವರ ಸಹಯೋಗದೊಂದಿಗೆ ನವೆಂಬರ್ 19 ರಂದು ಮಧ್ಯಾಹ್ನ 3-00 ಗಂಟೆಗೆ ಶ್ರೀ ಯಶವಂತ ಚಿತ್ತಾಲರ ಬದುಕು-ಸಾಹಿತ್ಯ ಕುರಿತ "ಚಿತ್ತಾಲ - ಚಿಂತನೆ" ವಿಚಾರ ಸಂಕಿರಣ ಕಾರ್ಯಕ್ರಮವನ್ನು ಖಿಂಚ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು ಇಲ್ಲಿ ಹಮ್ಮಿಕೊಂಡಿದೆ.

ಚಿತ್ತಾಲರೊಂದಿಗಿನ ಒಡನಾಟ - ಶ್ರೀ ಜಯಂತ ಕಾಯ್ಕಿಣಿ, ಚಿತ್ತಾಲರ ಸಣ್ಣಕಥಾಲೋಕ- ಶ್ರೀ ಎಸ್. ದಿವಾಕರ್, ಚಿತ್ತಾಲರ ಕಾದಂಬರಿ ಪ್ರಪಂಚ - ಡಾ ಜಿ.ಎನ್. ಸುಮಿತ್ರಾಬಾಯಿ, ಚಿತ್ತಾಲರು - ಸಮಗ್ರದರ್ಶನ - ಡಾ ರಾಜೇಂದ್ರ ಚೆನ್ನಿ - ಅವರುಗಳಿಂದ ಸಂಬಂಧಿತ ವಿಷಯಗಳಲ್ಲಿ ವಿಚಾರ ಮಂಡನೆ ನಡೆಯಲಿದೆ. ಚಿತ್ತಾಲರ ಸಣ್ಣಕಥೆಗಳ ಬಾನುಲಿ ರೂಪವನ್ನು ಶ್ರೀ ಬಿ. ವಿ. ರಾಜಾರಾಂ ಹಾಗೂ ತಂಡದವರು ಪ್ರಸ್ತುತ ಪಡಿಸಲಿದ್ದಾರೆ.

ಈ ಕಾರ್ಯಕ್ರಮದ ಧ್ವನಿಮುದ್ರಣವು ಆಕಾಶವಾಣಿ ಬೆಂಗಳೂರು ಹಾಗೂ ಕರ್ನಾಟಕದ ಎಲ್ಲಾ ಬಾನುಲಿ ಕೇಂದ್ರಗಳಿಂದ ದಿನಾಂಕ 25-11-2014 ರಂದು ಬೆಳಿಗ್ಗೆ 8.35 ರಿಂದ 10.05 ರವರೆಗೆ ಹಾಗೂ ಬೆಂಗಳೂರು ಆಕಾಶವಾಣಿ ಎಫ್. ಎಮ್. ರೇನ್‌ಬೋದಲ್ಲಿ ನವೆಂಬರ್ 26 ರಿಂದ 28 ರವರೆಗೆ ಬೆಳಿಗ್ಗೆ 80.02 ರಿಂದ 8.32 ಗಂಟೆವರೆಗೆ ಪ್ರಸಾರವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಮ:ಬಾಬು:ಜಿಪಿಆರ್.

# ಖಾಸಗಿ ಸಹಭಾಗಿತ್ವದಲ್ಲಿ ರಾಜ್ಯದ 6 ಬಂದರು ಅಭಿವೃದ್ಧಿ:

. **ಸಚಿವ ಬಾಬುರಾವ್ ಚಿಂಚನಸೂರ**

ಬೆಂಗಳೂರು, ನ. 17 (ಕರ್ನಾಟಕ ವಾರ್ತೆ)-

ರಾಜ್ಯದಲ್ಲಿರುವ 12 ಬಂದರುಗಳ ಪೈಕಿ 6 ಬಂದರುಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲಾಗುವುದು ಎಂದು ಜವಳಿ ಹಾಗೂ ಬಂದರು ಸಚಿವ ಬಾಬುರಾವ್ ಚಿಂಚನಸೂರ ಅವರು ತಿಳಿಸಿದರು.

ವಿಧಾನಸೌಧದ ತಮ್ಮ ಕಚೇರಿಯಲ್ಲಿ ಭೇಟಿ ಮಾಡಿದ ಪತ್ರಕರ್ತರನ್ನುದ್ದೇಶಿಸಿ ಮಾತನಾಡಿದ ಅವರು, ಕರಾವಳಿ ಭಾಗದ ಬೇಲಿಕೇರಿ, ಮಂಕಿ ಬಂದರು, ತದಡಿ, ಹೊನ್ನಾವರ, ಪಾವಿನಕೆರೆ ಹಾಗೂ ಮಲ್ಪೆ ಬಂದರುಗಳನ್ನು ಅಭಿವೃದ್ಧಿ ಪಡಿಸಲಾಗುವುದು  ಬೇಲಿಕೇರಿ ಬಂದರನ್ನು ಆಶ್ರೇಯ ಕಂಪೆನಿಯು, ಮಂಕಿ ಬಂದರನ್ನು ರೇಣುಕಾ ಶುಗರ್ಸ್ ಕಂಪೆನಿಯು ಹಾಗೂ ಆಂಧ್ರ ಪ್ರದೇಶ ಮೂಲದ ಕಂಪೆನಿಯೊಂದು ಹೊನ್ನಾವರ ಬಂದರನ್ನು ಅಭಿವೃದ್ಧಿ ಪಡಿಸಲು ಈಗಾಗಲೇ ಮುಂದೆ ಬಂದಿದೆ ಎಂದು ತಿಳಿಸಿದರು.

ಈ ಬಂದರುಗಳ ಅಭಿವೃದ್ಧಿಯಿಂದ ಸರ್ಕಾರಕ್ಕೆ ಆದಾಯ ಬರಲಿದೆ ಎಂದ ಅವರು 30 ವರ್ಷದ ಅವಧಿಗೆ ಲೀಸ್ ಆಧಾರದ ಮೇಲೆ ಬಂದರುಗಳನ್ನು ಅಭಿವೃದ್ಧಿ ಪಡಿಸಲು ಕಂಪೆನಿಗಳಿಗೆ ನೀಡಲಾಗುವುದು ಎಂದರು.

## ಸಮವಸ್ತ್ರ ಪೂರೈಕೆ :

ವಿದ್ಯಾ ವಿಕಾಸ ಯೋಜನೆಯಡಿ ಶಾಲಾ ಮಕ್ಕಳಿಗೆ ಸಮವಸ್ತ್ರ ಪೂರೈಕೆಗೆ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ 80 ಲಕ್ಷ ಮೀಟರ್ ಬಟ್ಟೆ ಒದಗಿಸಲು ಕೋರಲಾಗಿದ್ದು, ಇದಕ್ಕೆ 44 ಕೋಟಿ ರೂ. ಹಣ ಖರ್ಚಾಗಲಿದೆ. ಜನವರಿಯಲ್ಲಿ ಸಮವಸ್ತ್ರಗಳನ್ನು ಶಿಕ್ಷಣ ಇಲಾಖೆಗೆ ಪೂರೈಕೆ ಮಾಡಲಾಗುವುದು ಎಂದರು.

## ಜವಳಿ ಪಾರ್ಕ್

ಯಾದಗಿರಿಯಲ್ಲಿ ಒಂದು ಸಾವಿರ ಎಕರೆ ಪ್ರದೇಶದಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡಲಾಗುತ್ತಿದೆ ಎಂದ ಸಚಿವರು ಈಗಾಗಲೇ ಸುಮಾರು 50 ಕಂಪೆನಿಗಳು ಜವಳಿ ಪಾರ್ಕ್ ಪ್ರಾರಂಭಿಸಲು ಮುಂದೆ ಬಂದಿವೆ ಎಂದರು. ಇದರಿಂದಾಗಿ ಸುಮಾರು 10 ಸಾವಿರ ಕೋಟಿ ರೂ. ಬಂಡವಾಳ  ಹೂಡಿಕೆಯ ನಿರೀಕ್ಷೆ  ಹಾಗೂ ಸುಮಾರು 25-30 ಸಾವಿರ ಮಂದಿಗೆ ಉದ್ಯೋಗ ಲಭಿಸಲಿದೆ ಎಂದ ಸಚಿವರು, ಈಗಾಗಲೇ ಕೋಕಾ-ಕೋಲಾ ಕಂಪೆನಿಯು 50 ಎಕರೆ ಪ್ರದೇಶದಲ್ಲಿ ಸುಮಾರು 100 ಕೋಟಿ ರೂ. ಬಂಡವಾಳದಲ್ಲಿ ಬಾಟ್ಲಿಂಗ್ ಘಟಕ ಪ್ರಾರಂಭಿಸಲು ಮುಂದೆ ಬಂದಿದ್ದು, ಭೂಮಿ ಖರೀದಿಗೆ ಈಗಾಗಲೇ 5 ಕೋಟಿ ರೂ. ಹಣ ಪಾವತಿ ಮಾಡಿದ್ದಾರೆ ಎಂದರು.

ಯಾದಗಿರಿಯಲ್ಲಿ ಸುಮಾರು 3,300 ಎಕರೆ ಪ್ರದೇಶ ಸ್ವಾಧೀನ ಪಡಿಸಿಕೊಳ್ಳಲಾಗಿದ್ದು, ಸಾವಿರ ಎಕರೆ ಜವಳಿ ಪಾರ್ಕ್ ನಿರ್ಮಾಣಕ್ಕೆ, ಉಳಿದ 2300 ಎಕರೆ ಪ್ರದೇಶವನ್ನು ವಿವಿಧ ಕೈಗಾರಿಕೆಗಳಿಗೆ ಬಳಸಲಾಗುವುದು ಎಂದರು.

ಮುಂದಿನ ದಿನಗಳಲ್ಲಿ ಜಿಲ್ಲೆಗೊಂದು ಜವಳಿ ಪಾರ್ಕ್ ನಿರ್ಮಾಣ ಮಾಡುವ ಗುರಿಯನ್ನು ಸರ್ಕಾರ ಹೊಂದಿದೆ. ಜವಳಿ ಕ್ಷೇತ್ರದ ಅಭಿವೃದ್ಧಿಗೆ ರಾಜ್ಯದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಎಲ್ಲ ರೀತಿಯ ಸಹಕಾರ ನೀಡುತ್ತಿದ್ದು, ಹೆಚ್ಚಿನ ಮುತುವರ್ಜಿ ವಹಿಸುತ್ತಿದ್ದಾರೆ ಎಂದು ಜವಳಿ ಸಚಿವರು ತಿಳಿಸಿದರು.